[Govt. of Karnataka C.R.P. 67]

| Deposition Sheets (RP.No.57) Form No.4 (Civil) |
|---|

**IN THE COURT OF CIVIL JUDGE & J.M.F.C., KARKALA.**

**Criminal Case No. 2118/2023**

**..................................................Vs....................................**

ಸಾಕ್ಷಿದಾರನ ಹೆಸರು ಃ ಟಿ ಡಿ ನಾಗರಾಜ್ ಪಿ.ಡಬ್ಲ್ಯೂಃ 9

ತಂದೆಯ ಹೆಸರುಃ ಟಿ ಸಿ ಧರ್ಮಪ್ಪ ಸಿ.ಡಬ್ಲ್ಯೂಃ 23

ಪ್ರಾಯ ಃ 46 ವರ್ಷ

ಉದ್ಯೋಗ ಃ ಪೊಲೀಸ್ ನಿರೀಕ್ಷಕರು ಕಂಕನಾಡಿ ಪೊಲೀಸ್ ಠಾಣೆ

ವಾಸ ಃ ಮಂಗಳೂರು

ದಿಃ 16-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು ಡಿಸೆಂಬರ್ 2022 ರಿಂದ ಫೆಬ್ರವರಿ 2024 ರವರಿಗೆ ಕಾರ್ಕಳ ವೃತ ನೀರಿಕ್ಷಕರಾಗಿ ಕಾರ್ಕಳ ವೃತದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 08-08-2023 ರಂದು ಚಾಸಾ-22 ರವರಿಂದ ಕಡತವನ್ನು ಸ್ವೀಕರಿಸಿ ತನಿಖೆಯನ್ನು ಮುಂದುವರಿಸಿರುತ್ತೇನೆ. ಅದೇ ದಿನ ಚಾಸಾ-21 ರವರು ಪ್ರಕರಣದಲ್ಲಿ ಸ್ವಾಧೀನಪಡಿಸಿಕೊಂಡ ವಾಹನಗಳನ್ನು ಠಾಣಾ ಸೊತ್ತು ಪಟ್ಟಿ ಸಂಖ್ಯೆ 134/2023 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ವಾಹನಗಳ ಪರೀಶೀಲನೆ ನಡೆಸಿ ವರದಿ ನೀಡುವಂತೆ ಚಾಸಾ-15 ರವರಿಗೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ದಿಃ 11-08-2023 ರಂದು ಕಾರು ನೊಂದಣಿ ಸಂಖ್ಯೆ ಕೆ.ಎ.20 ಜಡ್.4597 ನಂಬ್ರದ ಮಾಲೀಕರಿಗೆ ಐ.ಎಮ್.ವಿ ಕಲಂ 133 ರಡಿಯಲ್ಲಿ ನೋಟೀಸು ಜಾರಿ ಮಾಡಿ ಅವರ ಉತ್ತರವನ್ನು ಪಡೆದುಕೊಂಡಿರುತ್ತೇನೆ. ನಂತರ 1 ನೇ ಆರೋಪಿಗೆ ಸಿ.ಆರ್.ಪಿ.ಸಿ ಕಲಂ 41(1)(ಎ) ಅಡಿಯಲ್ಲಿ ನೋಟೀಸು ಜಾರಿ ಮಾಡಿ ಠಾಣೆಗೆ ಹಾಜರಾಗುವಂತೆ ತಿಳಿಸಿರುತ್ತೇನೆ. ಸಂಜೆ 5.00 ಗಂಟೆಗೆ ಠಾಣೆಗೆ ಹಾಜರಾದ 1 ನೇ ಆರೋಪಿಯನ್ನು ದಸ್ತಗಿರಿ ನಿಯಮ ಪಾಲಿಸಿ ದಸ್ತಗಿರಿ ಮಾಡಿದ್ದು, ನಂತರ 2 ನೇ ಆರೋಪಿಯ ಜಾಮೀನಿನ ಮೇಲೆ

ಬಿಡುಗಡೆ ಮಾಡಿರುತ್ತೇನೆ. ನಂತರ ಕಾರು ಮಾಲೀಕರಿಗೆ ಮಾನ್ಯ ನ್ಯಾಯಾಲಯದ ಆದೇಶದ ಪ್ರಕಾರ ನಷ್ಟ ಭರ್ತಿ ಕರಾರನ್ನು ಪಡೆದುಕೊಂಡು ಕಾರು ಬಿಡುಗಡೆಗೊಳಿಸಿರುತ್ತೇನೆ. ನಂತರ ಚಾಸಾ-19 ಮತ್ತು 20 ರವರಿಂದ ಭಾರತೀಯ ಸಾಕ್ಷ್ಯ ಕಾಯಿದೆ ಕಲಂ 65(ಬಿ) ಅಡಿಯಲ್ಲಿ ದೃಢಪತ್ರಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 12-08-2023 ರಂದು ದ್ವಿಚಕ್ರ ವಾಹನ ನೊಂದಣಿ ಸಂಖ್ಯೆ ಕೆ.ಎ.20 ಇ.ಎಫ್ 7367 ನ್ನು ಚಾಸಾ-12 ಮತ್ತು ಚಾಸಾ-13 ರವರ ಸಮಕ್ಷಮ ಮಹಜರು ಮುಖೇನ ಚಾಸಾ-10 ರವರಿಗೆ ಬಿಡುಗಡೆಗೊಳಿಸಿರುತ್ತೇನೆ. ದಿಃ 14-08-2023 ರಂದು ಚಾಸಾ-14 ರವರಿಗೆ ಮೃತರ ಪಿ.ಎಮ್. ವರದಿ ನೀಡುವಂತೆ ಕೋರಿಕೆಪತ್ರ ಸಲ್ಲಿಸಿರುತ್ತೇನೆ. ದಿಃ 15-08-2023 ರಂದು ಚಾಸಾ-14 ರವರಿಂದ ಪಿ.ಎಮ್. ವರದಿ, ಚಾಸಾ-15 ರವರಿಂದ ಐ.ಎಮ್.ವಿ. ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಚಾಸಾ-1 ರವರ ಮರುಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ದಿಃ 12-10-2023 ರಂದು ಆರೋಪಿಗಳ ವಿರುದ್ಧ ತನಿಖೆಯನ್ನು ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನಿಪಿ-15 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-15(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-4 ರಿಂದ ನಿಪಿ-7 ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ಅಡಿಯಲ್ಲಿರುವ 2 ಪ್ರಮಾಣ ಪತ್ರದಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-16 ಮತ್ತು 17 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-16(ಎ) ಮತ್ತು ನಿಪಿ-17(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 1 ನೇ ಆರೋಪಿಗೆ ಐ.ಎಮ್.ವಿ ಕಲಂ 133 ರಡಿ ನೀಡಿದ ನೋಟೀಸು, ಅದಕ್ಕೆ ಪಡೆದುಕೊಂಡ ಉತ್ತರ, ನಷ್ಟ ಭರ್ತಿ ಕರಾರು, ಪಿ.ಎಮ್ ವರದಿ, ದಿಃ 12-10-2023 ರ ವಾಹನ ಬಿಡುಗಡೆ ಮಹಜರುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-18 ರಿಂದ 22 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ-18(ಎ) ರಿಂದ 22(ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸಬಹುದು. ಸಾಕ್ಷಿಯ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ. ಎಸ್.ಕೆ.ಎಸ್. ವಕೀಲರಿಂದಃ</u>

ನಾನು ಅಪಘಾತ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ. ನಾನು ದಿಃ 08-08-2023 ರಂದು ಈ ಪ್ರಕರಣ ದ ಕಡತವನ್ನು ಸ್ವೀಕರಿಸಿರುತ್ತೇನೆ. ಅದಕ್ಕಿಂತ ಪೂರ್ವದಲ್ಲಿ ಚಾಸಾ-21 ಮತ್ತು ಚಾಸಾ-22 ರ ಪ್ರಕರಣದ ಆಂಶಿಕ ತನಿಖೆ ನಡೆಸಿರುತ್ತಾರೆ. ನಾನು ಚಾಸಾ-10 ರವರ ಮರುಹೇಳಿಕೆಯನ್ನು ಮಾತ್ರ ಪಡೆದಿರುತ್ತೇನೆ. ಫೋನ್ ನ ಸಿ.ಡಿ.ಆರ್. ನ್ನು ವಶಪಡಿಸಿಕೊಂಡರೆ ಅದರ ಲೊಕೇಷನ್ ಪತ್ತೆ ಹಚ್ಚಬಹುದು ಎಂದರೆ ಸರಿ. ಚಾಸಾ-1 ರವರ ಹಾಗೂ ಇತರ ಯಾವುದೇ ವ್ಯಕ್ತಿಗಳ ಸಿ.ಡಿ.ಆರ್. ಪಡೆದು ಲೊಕೇಷನ್ ಪತ್ತೆ ಹಚ್ಚಿ ರುವುದಿಲ್ಲ. ಅದರ ಅಗತ್ಯ ಇರುವುದಿಲ್ಲ. ನಾನು ಚಾಸಾ-1 ರವರು ಘಟನಾ ಸ್ಥಳದಲ್ಲಿ ಇದ್ದರು ಎಂದಬ ಬಗ್ಗೆ ಖಚಿತ ಪಡಿಸಿಕೊಳ್ಳಲು ಅವರು ಕೆಲಸ ಮಾಡುವ ಸ್ಥಳಕ್ಕೆ ಹೋಗಿ ವಿಚಾರಿಸಿರುವುದಿಲ್ಲ. ಮೃತ ಮಂಜುನಾಥ ಶೆಟ್ಟಿರವರಿಗೆ ಚಾಲನಾ ಪರವಾನಿಗೆ ವಾಹನದ ವಿಮೆ, ಹೊಗೆ ತಪಾಸಣಾ ಪತ್ರ ಇರುವುದಿಲ್ಲ.

ಚಾಸಾ-1 ರವರು ಮೃತ ಮಂಜುನಾಥ ಶೆಟ್ಟಿರವರನ್ನು ಗಾಜರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವ ಬಗ್ಗೆ ನಾನು ವಿಚಾರಿಸಿರುವುದಿಲ್ಲ. ಅಪಘಾತ ಪಡಿಸಿದ ಕಾರಿನಲ್ಲಿ 1 ಮತ್ತು 2 ನೇ ಆರೋಪಿತರು ಇದ್ದರಾ ಎಂದರೆ 1 ನೇ ಆರೋಪಿತರು ಮಾತ್ರ ಕಾರು ಚಲಾಯಿಸುತ್ತಿದ್ದರು. ಚಾಸಾ-2 ಮತ್ತು ಚಾಸಾ-3 ರವರ ಹೇಳಿಕೆಯಲ್ಲಿ ಆರೋಪಿಯ ಹೆಸರು ಏಕಾ ಶೆಟ್ಟಿ ಎಂದು ಕಾಣಿಸಲಾಗಿರುತ್ತದೆ ಎಂದರೆ ಕಣ್ತಪ್ಪಿನಿಂದ ಆಗಿರುತ್ತದೆ ಆ ಬಗ್ಗೆ ನಿವೇದನೆ ಕೊಟ್ಟಿರುತ್ತೇವೆ. ಪ್ರ.ವ.ವರದಿಯಲ್ಲಿ ಆರೋಪಿಯ ಹೆಸರು ಇರುವುದಿಲ್ಲ. ತನಿಖೆ ದಿಃ 11-08-2023 ರಂದು ಪ್ರಾರಂಭವಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯನ್ನು ದಿಃ 11-08-2023 ರಂದು ನೋಡಿರುತ್ತೇನೆ ಎಂದರೆ ಸರಿ. ಪ್ರತ್ಯಕ್ಷ ಸಾಕ್ಷಿದಾರರನ್ನು ಕರಯಿಸಿ ಆರೋಪಿಯನ್ನು ಪತ್ತೆ ಹಚ್ಚುವ ಪ್ರಯತ್ನ ಮಾಡಿರುವುದಿಲ್ಲ ಎಂದರೆ ಸರಿ. ಆರೋಪಿ ಗುರುತು ಪತ್ತೆ ಕವಾಯತು ಮಾಡಿರುವುದಿಲ್ಲ. 2 ನೇ ಆರೋಪಿ ಹೊಗೆ ತಪಾಸಣಾ ಪತ್ರ ಹೊಂದಿಲ್ಲ ಎಂದು ದಿಃ 11-08-2023 ರಂದು 1 ನೇ ಆರೋಪಿ ಐ.ಎಮ್.ವಿ ನೋಟೀಸಿಗೆ ಉತ್ತರ ನೀಡುವಾಗ ನನಗೆ ಗೊತ್ತಾಗಿರುತ್ತದೆ. ನಾನು 1 ಮತ್ತು 2 ನೇ ಆರೋಪಿತರಿಗೆ ಹೊಗೆ ತಪಾಸಣಾ ಪ್ರಮಾಣ ಪತ್ರ ಇಲ್ಲ ಎಂದು ಐ.ಎಮ್.ವಿ ನೋಟೀಸಿನಲ್ಲಿ ತಿಳಿಸಿರುತ್ತೇನೆ. ಅದೇ ದಿನ ಅವರು ಉತ್ತರ ಕೊಟ್ಟಿರುತ್ತಾರೆ. ಆರೋಪಿತರು

ಬೋಳ ಗ್ರಾಮದವರಾಗಿದ್ದು ಅದು ನಮ್ಮ ಠಾಣಾ ಸರಹತ್ತಿಗೆ ಬರುತ್ತದೆ. ಠಾಣೆಯಿಂದ ಬೋಳ ಗ್ರಾಮ 10 ಕಿ.ಮೀ ದೂರ ಇರಬಹುದು.

ಕಾರ್ಕಳ-ಪಡುಬಿದ್ರೆ ರಾಜ್ಯ ಹೆದ್ದಾರಿಯಾಗಿದ್ದು, ಎರಡೂ ಬದಿಯಲ್ಲಿ ಬಿಳಿ ಪಟ್ಟಿ ಹಾಕಲಾಗಿರುತ್ತದೆ. ಯೂ ಟರ್ನ್ ಗಳಲ್ಲಿ ಮುನ್ನೆಚರಿಕೆ ಸಲುವಾಗಿ ಸಿಗ್ನಲ್ ಗಳನ್ನು ಹಾಕಲಾಗಿರುತ್ತದೆ. ಚಾಸಾ-1 ರವರು ಮೃತರ ತಂಗಿ ಮಗ ಎಂದು ತನಿಖೆಯಲ್ಲಿ ಕಂಡುಬಂದಿರುತ್ತದೆಯಾ ಎಂದರೆ ಇಲ್ಲ. ಈ ಪ್ರಕರಣದಲ್ಲಿ ತಡವಾಗಿ ಸ್ಥಳ ಮಹಜರು ಮಾಡಿದ್ದು, ಸಾಕ್ಷ್ಯ ನಾಶವಾಗಿರುತ್ತದೆ ಎಂದರೆ ಸರಿಯಲ್ಲ. ಗರಿಷ್ಟ ವೇಗ ಎಷ್ಟು ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಮೃತರ ಕುಟುಂಬಕ್ಕೆ ವಿಮಾ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಲಾಗಿರುತ್ತದೆ ಎಂದರೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಅಪಘಾತ ನಡೆದಿರುವುದಿಲ್ಲ ಹಾಗೂ ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ